ಬಿಜಾಪುರ ನಗರ ಪುರಸಭೆಯಲ್ಲಿರುವ ಪೌರ ಕಾರ್ಮಿಕರು

560 - ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದ ಜನಸಂಖ್ಯೆ ಎಷ್ಟು ?

ಆ) ಬಿಜಾಪುರ ನಗರಸಭೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಸಂಖ್ಯೆ ಎಷ್ಟು ?

ಇ) ಖಾಲಿ ಇರುವ ಪೌರ ಕಾರ್ಮಿಕರ ಹುದ್ದೆಗಳೆಷ್ಟು ?

ಈ) ಈಗಿರುವ ನಗರದ ಜನಸಂಖ್ಯೆಗೆ ಹಾಲಿ ಇರುವ ಪೌರ ಕಾರ್ಮಿಕರ ಸಂಖ್ಯೆ ಸಾಕಾಗುತ್ತಿದೆಯೇ ?

ಉ) ಹಾಲಿ ಇರುವ ಪೌರ ಕಾರ್ಮಿಕರ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಮೀರಾಜುದ್ದೀನ್ ಎನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) 1991ರ ಜನಗಣತಿಯ ಅನ್ವಯ ಬಿಜಾಪುರ ನಗರದ ಜನಸಂಖ್ಯೆ 1,91,131.

ಆ) 181.

ಇ) 108.

ಈ) ಇಲ್ಲ.

ಉ) 40 ಜನ ಪೌರ ಕಾರ್ಮಿಕರನ್ನು ನೇಮಕ ಮಾಡಲು ನಗರ ಸಭೆಯು ಕ್ರಮ ಕೈಗೊಂಡಿತ್ತು. ಆದರೆ ಕೆಲವರು ಈ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲಿ ಅಂತಿಮವಾಗಿ ತೀರ್ಮಾನವಾದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಬಿಜಾಪುರದ ನಗರದ ಜನಸಂಖ್ಯೆ 1,91,131 ಇದೆ ಎಂದು ಕೊಟ್ಟಿದ್ದಾರೆ. 75 ಸಾವಿರ ಜನಸಂಖ್ಯೆ ಇದ್ದಂಥ ಸಂದರ್ಭದಲ್ಲಿ ಅಂದರೆ 1967ನೇ ಇಸವಿಯಲ್ಲಿ 285 ಜನ ಪೌರ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈಗ ಹತ್ತಿರ ಹತ್ತಿರ ಎರಡು ಲಕ್ಷ ಜನಸಂಖ್ಯೆ ಇರತಕ್ಕಂಥ ಸಂದರ್ಭದಲ್ಲಿ ಕೇವಲ 181 ಪೌರ ಕಾರ್ಮಿಕರು ಮಾತ್ರ ಇದ್ದಾರೆ. 108 ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಹಾಗಾದರೆ ಆ ಬಿಜಾಪುರದ ನಗರದ ಪರಿಸ್ಥಿತಿ ಏನು ? 75 ಸಾವಿರ ಜನಸಂಖ್ಯೆ ಇದ್ದಾಗ 285 ಜನ ಪೌರ ಕಾರ್ಮಿಕರು ಇದ್ದರೆ, ಅದು 2 ಲಕ್ಷ ಆದಾಗ 181ಕ್ಕೆ ಬಂದಿದೆ. 108 ಹುದ್ದೆಗಳು ಖಾಲಿ ಇವೆ. ಇದನ್ನು ಎಷ್ಟು ವರ್ಷಗಳಿಂದ ಖಾಲಿ ಇಟ್ಟಿದ್ದೀರಿ ?

ಅಧ್ಯಕ್ಷರು : ಅದರ ಕೆಳಗಡೆ ಇರುವ ಉತ್ತರವನ್ನು ಓದಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆ ಉತ್ತರ ಬೇರೆ. 40 ಜನ ಪೌರ ಕಾರ್ಮಿಕರನ್ನು ತೆಗೆದುಕೊಂಡಿದ್ದೇವೆ. ಕೋರ್ಟಿಗೆ ಹೋಗಿದ್ದಾರೆ ಎಂದು ಹೇಳಿದ್ದಾರೆ. ನಾನು ಅದಕ್ಕೇ ಬರುತ್ತಿದ್ದೇನೆ.

ಅಧ್ಯಕ್ಷರು : ರೆಕ್ರೂಟ್‌ಮೆಂಟ್ ಪ್ರೋಸೆಸ್ ಪ್ರಾರಂಭವಾಗುವ ಹೊತ್ತಿಗೆ ಕೋರ್ಟಿಗೆ ಹೋಗಿದ್ದಾರಂತೆ. ಕೋರ್ಟಿಗೆ ಹೋದಾಗ ಅವರು ಏನು ಮಾಡಲು ಆಗುತ್ತದೆ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : 40 ಜನ ಮಾತ್ರವೇ ಕೋರ್ಟಿಗೆ ಹೋಗಿರುವುದು. 40 ಹುದ್ದೆಗಳನ್ನು ಮಾತ್ರ ಇವರು ಮಾಡಿರುವುದು. ಕೋರ್ಟಿಗೆ ಯಾವಾಗ ಹೋದರು? ಕೋರ್ಟಿಗೆ ಹೋಗಿರತಕ್ಕಂಥ ಕೇಸಿನ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಅಧ್ಯಕ್ಷರು : ರೆಡ್ಡಿಯವರೇ, you are no longer a new member. You are a seasoned member. You can't split every sentence and make inferences. 108 ಹುದ್ದೆಗಳು ಖಾಲಿ ಇವೆ. ರೆಕ್ರೂಟ್‌ಮೆಂಟ್ ಪ್ರೋಸೆಸ್ ಪ್ರಾರಂಭ ಮಾಡಿದ್ದಾರೆ. 40 ಜನರನ್ನು ತೆಗೆದುಕೊಳ್ಳುವ ಹೊತ್ತಿಗೆ ಆ ವಿಚಾರವನ್ನು ಹೈಕೋರ್ಟಿಗೆ ತೆಗೆದುಕೊಂಡು ಹೋಗಿದ್ದಾರೆ. ಹೈಕೋರ್ಟ್ ಇಂಟರ್‌ಫಿಯರ್ ಆಗಿ ಅವರು ಸ್ಟೇ ನೀಡಿದಾಗ ಹೇಗೆ ಇವರು ಮಾಡಲು ಬರುತ್ತದೆ, ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೈಕೋರ್ಟಿನಲ್ಲಿರತಕ್ಕ ಸ್ಟೇಯನ್ನು ವೆಕೇಟ್ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಅಧ್ಯಕ್ಷರು : ಅದನ್ನು ಕೇಳಿ, ಅದಕ್ಕೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ : ಸನ್ಮಾನ್ಯ ಅಧ್ಯಕ್ಷರೇ, 40 ಜನ ಪೌರ ಕಾರ್ಮಿಕರನ್ನು 1986ರಲ್ಲಿ ಸಿ.ಎಂ.ಸಿ ನವರು ರೆಕ್ರೂಟ್‌ಮೆಂಟ್ ಮಾಡಿದ್ದರು. ಆ ಒಂದು ರೆಸೊಲ್ಯೂಷನ್‌ಗೆ ಅಲ್ಲಿಯ ಡಿವಿಷನಲ್ ಕಮೀಷನರ್‌ರವರು ಕೋರ್ಟಿನಲ್ಲಿ ಛಾಲೆಂಜ್ ಮಾಡಿದರು ಆದ್ದರಿಂದ ಈಗ ಇದು ಹೈಕೋರ್ಟಿನಲ್ಲಿ ಕೇಸ್ ಇದೆ. ಹೈಕೋರ್ಟಿನಲ್ಲಿ ಕೇಸ್ ಇದ್ದಾಗ ನಾವು ಏನೂ ಮಾಡಲು ಆಗುವುದಿಲ್ಲ. ಅದಕ್ಕಾಗಿ ನಾವೂ ಸರ್ಕಾರದ ಕಡೆಯಿಂದ ಒಬ್ಬ ಅಡ್ವೋಕೇಟ್‌ರವರನ್ನು ಇಟ್ಟಿದ್ದೇವೆ. ಮತ್ತೊಂದು ವಿಷಯವೆಂದರೆ, ಅಲ್ಲಿ ಈಗ ಶಾರ್ಟ್ ಟರ್ಮ್ ಟೆಂಡರ್ ಕರೆದು ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡು ಕೆಲಸ ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಇಲ್ಲಿ ಬಿಜಾಪುರದಲ್ಲಿ ಮಾತ್ರವಲ್ಲ, ಇಡೀ ರಾಜ್ಯದ ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಇದೇ ಸಮಸ್ಯೆಯಾಗಿದೆ. 1993ರಲ್ಲಿ ಅಲ್ಲಿಯ ನೌಕರರಿಗೆ ಸಂಬಳ ಕೊಡಲೂ ಅವರ ಹತ್ತಿರ ಫೈನಾಷಿಯಲ್ ಪೊಸಿಷನ್ ಚೆನ್ನಾಗಿ ಇಲ್ಲ. ಆ ಕಾರಣಕ್ಕೋಸ್ಕರ ಮುಂದೆ ಯಾವುದೇ ರೆಕ್ರೂಟ್‌ಮೆಂಟ್ ಮಾಡಬಾರದು ಎಂದು ಸರ್ಕಾರ ಬ್ಯಾನ್ ಮಾಡಿದೆ. ಈಗ ನಾವು ಇಡೀ ರಾಜ್ಯದಿಂದ ಜಿಲ್ಲಾವಾರು ಮಾಹಿತಿಯ ವರದಿಯನ್ನು ತರಿಸುತ್ತಿದ್ದೇವೆ. ನಂತರ ಜನಸಂಖ್ಯೆಯ ಆಧಾರದ ಮೇಲೆ ಯಾವ ಯಾವ ಮುನಿಸಿಪಾಲಿಟಿಗೆ ಎಷ್ಟು ಪೌರ ಕಾರ್ಮಿಕರನ್ನು ನೇಮಕ ಮಾಡಬೇಕು ಎನ್ನುವ ಬಗ್ಗೆ ಈಗಾಗಲೇ ನಾವು ನಮ್ಮ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇವೆ. ಮುಂದಿನ ತಿಂಗಳು ಇನ್ನೊಂದು ಸಭೆ ಮಾಡಿ ನಾವು ಏನು ಮಾಡಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.